ಇವಳೆಲ್ಲೋ ಕಮ್ಯುನಿಸ್ಟ್ ದೇಶದಲ್ಲಿರಬೇಕಾಗಿತ್ತು ಎನಿಸಿದ್ದು ಸುಳ್ಳಲ್ಲ.

ನಮ್ಮ ಪಕ್ಕದ ಮನೆಯವರೂ ತಮ್ಮ ಕೆಲಸದವಳು ರಜಾ ಹಾಕಿದಾಗ ನಾಲ್ಕು ದಿನಗಳ ಮಟ್ಟಿಗೆ ನಂದಿನಿಯನ್ನೇ ಕರೆದದ್ದುಂಟು. 'ನಾಲ್ಕು ದಿನಗಳ ದುಡ್ಡನ್ನೂ ಒಟ್ಟಿಗೆ ಕೊಡುತ್ತೇವೆ' ಎಂದು ಹೇಳಿದ್ದರು. ಇವಳೋ... ನಿತ್ಯ ಬೆಳಗಾಗೆದ್ದರೆ ಕಿಟಕಿಯಲ್ಲಿ ಅವರ ಮನೆಗಳನ್ನು ವೀಕ್ಷಿಸುತ್ತಾ, ಚಡಪಡಿಸುತ್ತಾ ನಿಲ್ಲುವುದು. ಅಲ್ಲಿ ಚಲನವಲನಗಳು ಕಂಡುಬಂದಾಗ ಸಮಾಧಾನದ ಉಸಿರು ಬಿಟ್ಟು ಮುಂದಿನ ಕೆಲಸ ಆರಂಭಿಸುವುದು. ಒಂದು ದಿನ ಪ್ರಿಯಂವದಾ ತಡೆಯದೇ, "ಅದೇಕೆ ಹೀಗೆ ನೋಡುತ್ತೀ?" ಎಂದು ಕೇಳಿದರಂತೆ. ಅವಳು, "ದೀದಿ... ನನಗೆ ಕೊಡುವ ದುಡ್ಡನ್ನು ಉಳಿಸಿಕೊಳ್ಳಲು ಅವರೆಲ್ಲಾದರೂ ಓಡಿ ಹೋದರೆ? ಗಾಯಬ್ ಆದರೆ? ನಮ್ಮೂರಿನಲ್ಲಿ ಹೀಗೆ ಓಡಿಹೋಗುತ್ತಾರೆ" ಎಂದು ಮುಗ್ಧವಾಗಿ ಹೇಳಿದಾಗ ಅವರು ಹೊಟ್ಟೆ ಹುಣ್ಣಾಗುವಷ್ಟು ನಕ್ಕರಂತೆ. "ಹುಚ್ಚೀ... ನಿನಗೆ ಕೊಡಬೇಕಾಗಿರುವ ನೂರೋ... ಇನ್ನೂರೋ ರೂಪಾಯಿಗಳನ್ನು ಉಳಿಸೋಕೆ ಅವರು ಓಡಿಹೋಗಬೇಕೆ? ಅದಕ್ಕೆಷ್ಟು ಖರ್ಚು ಗೊತ್ತೆ? ಅದಕ್ಕೆ ವಿದ್ಯೆ ಕಲಿ ಅನ್ನೋದು. ಕೊಡ್ತಾರೆ... ಎಲ್ಲೂ ಓಡಿಹೋಗಲ್ಲ. ನಾನು ಸಾಕ್ಷಿಯಾಗಿದೀನಿ" ಎಂದು ಹೇಳಿದರೂ ಅವಳ ಕಳವಳ ತಪ್ಪಲಿಲ್ಲ. ಅವರು ದುಡ್ಡು ಕೊಟ್ಟ ಮೇಲೆಯೇ ಅವಳು ಸುಮ್ಮನಾಗಿದ್ದು. ಕಿಟಕಿಯಲ್ಲಿ ವೀಕ್ಷಿಸುವದನ್ನು ಬಿಟ್ಟದ್ದು. ಅದರಲ್ಲೂ ಒಬ್ಬರು ತುಂಬಾ ಕಡಿಮೆ ಕೊಟ್ಟಿದ್ದರು. "ಅವಳನ್ನೇ ಹೆಚ್ಚಿಗೆ ಕೇಳಲು ಕಳಿಸಬೇಕೆಂದರೆ ಅವರು ಚೌಕಾಸಿ ಮಾಡಿದ್ದು ಇವಳಿಗೆ ಅರ್ಥವಾಗುವುದಿಲ್ಲ. ನಾನು ಅವಳ ಪರವಾಗಿ ಕೇಳಲು ಹೋಗುವುದು ಚೆನ್ನಾಗಿರಲ್ಲ. ಮನೆಯಲ್ಲಿ ಗೊತ್ತಾದರೆ ಹೊಡೆದೇ ಬಿಡುತ್ತಾರೆ. ಅದಕ್ಕೇ ಸುಮ್ಮನಾಗಿಬಿಟ್ಟೆ" ಎಂದು ಪ್ರಿಯಂವದಾ ಹೇಳಿದಾಗ ವಿಷಾದವೆನಿಸಿತ್ತು. ಅಮಾಯಕತೆಯ ಲಾಭ ಪಡೆದುಕೊಳ್ಳುವವರೇ ಜಾಸ್ತಿ. ಇವೆಲ್ಲ ನಿರಕ್ಷರಿಗಳಿಗಿರುವ ತೊಂದರೆಗಳೇ.

ಮೂರನೇ ದಿನದಿಂದ ನಮ್ಮ ಮನೆಯಲ್ಲೂ ಮೈಚಳಿ ಬಿಟ್ಟು ಮಾತನಾಡತೊಡಗಿದಳು. ಬಂದ ತಕ್ಷಣವೇ, "ಇಂದು ನಾನು ನಿಮ್ಮ ಮನೆಯಲ್ಲೇ ಊಟ ಮಾಡುತ್ತೇನೆ" ಎಂದು ಘೋಷಿಸಿದಳು. ನಾನು ಮುಗುಳ್ನಗುತ್ತ, "ಸರಿ" ಎಂದೆ. ಅಡಿಗೆಯಾಗುತ್ತಲೇ, "ಬಿಸಿಯಾಗಿದೆ. ತಟ್ಟೆ ಬಡಿಸಿ ಕೊಡುತ್ತೇನೆ. ಊಟ ಮಾಡು" ಎಂದೆ. "ಉಹ್ಞೂಂ... ಎಲ್ಲ ಕೆಲಸಗಳನ್ನು ಮುಗಿಸಿಯೇ ಊಟ" ಎಂದಳು. ನಾನು ಮೊದಲ ಕೆಲಸದವಳಿಗೆ ಕೊಡುತ್ತಿದ್ದಂತೆ ಎರಡು ಚಪಾತಿ, ಒಂದಷ್ಟು ಅನ್ನ, ಹುಳಿ, ಪಲ್ಯ ಕೊಟ್ಟಿದ್ದೆ. ಅನ್ನವನ್ನು ಪಲ್ಯದೊಂದಿಗೆ... ಚಪಾತಿಯನ್ನು ಸಾಂಬಾರಿನಲ್ಲಿ ಅದ್ದಿ ತಿನ್ನತೊಡಗಿದಾಗ ನಾನೇ ಅವಳಿಗೆ ಹೇಳಿಕೊಟ್ಟಿದ್ದೆ. ನಮ್ಮ ಮತ್ತು ಅವರ ಅಡಿಗೆ, ಊಟದ ಶೈಲಿಗಳು ಭಿನ್ನವಲ್ಲವೆ? ಮರುದಿನ ನಾನು ಓದುತ್ತ ಕುಳಿತಿದ್ದಾಗ ಕಸ ಗುಡಿಸುತ್ತಿದ್ದವಳು, "ದೀದಿ, ಹೊಟ್ಟೆ ತುಂಬುವಂಥ... ದಪ್ಪಗಾಗುವಂಥ ಮಾತ್ರೆಗಳು ಸಿಗುತ್ತಾ? ತಂದುಕೊಡಿ" ಎಂದಳು. ನಾನು ಅಚ್ಚರಿಯಿಂದ, "ಎಲ್ಲರೂ ತೆಳ್ಳಗಾಗಲು ಇಷ್ಟಪಡುತ್ತಾರೆ. ಕಷ್ಟಪಡುತ್ತಾರೆ... ನೀನೇನು ದಪ್ಪಗಾಗಬೇಕೂಂತಿದೀಯಾ. ಈಗಾಗಲೇ ದಪ್ಪಗಿದ್ದೀಯಲ್ಲ..." ಎಂದು ಕೇಳಿದೆ. "ಇಲ್ಲ ದೀದಿ. ಇನ್ನಷ್ಟು ದಪ್ಪಗಾಗಬೇಕು" ಎಂದಳು. "ಹೆಚ್ಚು ಊಟ ಮಾಡು... ದಪ್ಪಗಾಗುತ್ತೀ" ಎಂದೆ. "ಅದೇ... ಕೊಡುವವರು ಬೇಕಲ್ಲ" ಎಂದಳು ನೇರವಾಗಿ ನನ್ನನ್ನೇ ನೋಡುತ್ತ. ನನಗೆಲ್ಲೋ ಕೆನ್ನೆಗೆ ಬಾರಿಸಿದಂತಾಯಿತು. ನಾನು ಇವಳಿಗೆ ಹೊಟ್ಟೆ ತುಂಬ ಊಟ ಕೊಡಲಿಲ್ಲವೇ? ಅವಮಾನವೆನ್ನಿಸಿತು. ಅಂದು ಎರಡು ಚಪಾತಿಗಳ ಜೊತೆಗೆ ತಟ್ಟೆಯ ಮುಕ್ಕಾಲು ಭಾಗ ಅನ್ನ ಬಡಿಸಿದೆ. ಜೊತೆಗೆ ಜಾಸ್ತಿ ಸಾಂಬಾರು, ಮಜ್ಜಿಗೆ... ಎಲ್ಲ ಕೊಟ್ಟೆ. ನೋಡುತ್ತಲೇ ಅವಳ ಕಂಗಳು ಸಂತಸದಿಂದ ಅರಳಿದವು. ಊಟದ ಅನಂತರ, "ಹೊಟ್ಟೆ ತುಂಬಿತಾ?" ಎಂದು ಕೇಳಿದೆ. ಏದುಸಿರು ಬಿಡುತ್ತ ತಲೆಯಾಡಿಸಿದಳು. "ಇನ್ನು ಒಂದು ಸಣ್ಣ ಕೆಲಸವನ್ನೂ ಹೇಳಬೇಡಿ. ಇನ್ನೇನಿದ್ದರೂ ನಾಳೆಯೇ" ಎನ್ನುತ್ತ ಹೊರಟಳು. ಕಪ್ಪೆ ನುಂಗಿದ ಹಾವಿಂತಾಗಿತ್ತು ಅವಳ ಸ್ಥಿತಿ.